# GATWU - ಏವರಿ ಡೆನಿಸನ್(ಇಂಡಿಯಾ) ಪ್ರೈ.ಲಿ.ಶಾಖೆ

ಆತ್ಮೀಯ ಕಾರ್ಮಿಕ ಸಂಗಾತಿಗಳೇ,

ನಾವೆಲ್ಲ ಒಗ್ಗಟ್ಟಾಗಿರುವುದನ್ನು ಸಹಿಸದ ಆಡಳಿತವರ್ಗದವರು ಇಲ್ಲಸಲ್ಲದ ಸುಳ್ಳುಗಳನ್ನು ಹೇಳುತ್ತಾ, ನಮ್ಮಲ್ಲಿ ಅನುಮಾನ ಹುಟ್ಟು ಹಾಕಿ ನಮ್ಮನ್ನು ಒಡೆಯಲು ಸತತವಾಗಿ ಪ್ರಯತ್ನ ಮಾಡುತ್ತಲೇ ಇದ್ದಾರೆ. ಈ ಮೂಲಕ ತನ್ನ ಕೈಗೊಂಬೆ ಯೂನಿಯನ್‌ಗೆ ಸೇರಲು ಪರೋಕ್ಷವಾಗಿ ಒತ್ತಡ ಹಾಕುತ್ತಿದ್ದಾರೆ.

ಸ್ನೇಹಿತರೇ,

ಮೊದಲನೆಯದಾಗಿ, ಆಡಳಿತವರ್ಗದವರು ದಿನಾಂಕ 05.9.2018 ನಡೆದ ಟೌನ್‌ಹಾಲ್ ಮೀಟಿಂಗ್‌ಗೆ ಕೆಲವೇ ಕಾರ್ಮಿಕರನ್ನು ಕರೆದು, GATWU, NTUI ಮತ್ತು ETI ಬಗ್ಗೆ ಸುಳ್ಳುಮಾಹಿತಿಗಳನ್ನು ನೀಡಿದ್ದಾರೆ. "ಮೊದಲು GATWU ನವರು ಬಂದರು, ಆಮೇಲೆ NTUI ನವರು ಬಂದರು ಈಗ ETI ಬಂದಿದ್ದಾರೆ, ಇವರೆಲ್ಲರೂ ಸೇರಿ ಕಂಪನಿಯನ್ನು ಹಾಳುಮಾಡುತ್ತಿದ್ದಾರೆ, ಇವರೆಲ್ಲ ಬ್ರಾಂಡ್‌ಗಳಿಗೆ ತಿಳಿಸಿ ಆರ್ಡರ್ ಬರುತ್ತಿಲ್ಲ ಆದ್ದರಿಂದ OT ಯನ್ನು ನಿಲ್ಲಿಸಿದ್ದೇವೆ ಎಂದೆಲ್ಲ ಸುಳ್ಳು ಹೇಳಿದ್ದಾರೆ. ಪದೇ ಪದೇ "3ನೇ ಪಾರ್ಟಿ ಬರುವುದು ಬೇಡ ಬಂದರೆ ಕಂಪನಿ ಮುಚ್ಚುತ್ತದೆ' ಎಂದು ಹೇಳಿದ್ದಾರೆ. **ಕಾರ್ಮಿಕರಿಗೆ ಸುಳ್ಳು ಹೇಳುವುದು, ಆ ಮೂಲಕ ಅವರನ್ನು ಒಡೆಯುವುದು ಕಾರ್ಮಿಕ ವಿರೋಧೀ ನೀತಿಯಾಗಿದ್ದು, ಸಂವಿಧಾನ ವಿರೋಧಿ ಮತ್ತು ಕಾನೂನು ಬಾಹಿರವಾಗಿದೆ.**

ಸಂಗಾತಿಗಳೇ ಒಮ್ಮೆ ಯೋಚಿಸಿ,

- ಆಡಳಿತವರ್ಗವು ತಾವು ಹೇಳುತ್ತಿರುವ ಯಾವುದೇ ವಿಷಯಕ್ಕೆ ದಾಖಲೆಗಳನ್ನು ಒದಗಿಸಿದ್ದಾರೆಯೇ?
- ಯಾವ ಬ್ರಾಂಡ್ ಆದರೂ 'ನಾವು ಆರ್ಡರ್ ಕೊಡುವುದಿಲ್ಲ' ಎಂದು ಅಧಿಕೃತವಾಗಿ ತಿಳಿಸಿದ್ದಾರೆಯೇ?
- ಅಂತಹ ದಾಖಲೆ ಇದ್ದರೆ ಆಡಳಿತವರ್ಗ ಅದನ್ನು ನಮಗೆ ನೀಡುತ್ತಾರೆಯೇ?

ಆಡಳಿತವರ್ಗಕ್ಕೆ GATWU ಹಾಕುವ ಸವಾಲೇನೆಂದರೆ, ಆರ್ಡರ್ ಕಡಿಮೆಯಾಗಿರುವ ಯಾವುದೇ ರೀತಿಯ ದಾಖಲೆಗಳಿದ್ದಲ್ಲಿ ಈ ತಕ್ಷಣವೇ ಬಹಿರಂಗಗೊಳಿಸಲಿ. ಮತ್ತು ETI ನಿಂದ ತೊಂದರೆಯಾಗಿದ್ದರೆ ಅದನ್ನು ಮುಂದಿನ ಅಧಿಕೃತ ಸಭೆಗಳಲ್ಲಿ ಪ್ರಶ್ನಿಸಲಿ.

ನಮಗೆ ಆರ್ಥಿಕ ನಷ್ಟ ಉಂಟು ಮಾಡಿ, ಕಿರುಕುಳ ಕೊಡುವ ಉದ್ದೇಶದಿಂದ OT ನಿಲ್ಲಿಸಿರುವುದೇ ಹೊರತು, ಆರ್ಡರ್ ಇಲ್ಲವೆಂದಲ್ಲ ಎಂದು ನಮಗೆ ಸ್ಪಷ್ಟವಾಗಿ ತಿಳಿದಿದೆ. ಏಕೆಂದರೆ ಈ ಹಿಂದಿನ ತಿಂಗಳುಗಳಿಗಿಂತ ಈ ತಿಂಗಳು ಹೆಚ್ಚು ಆರ್ಡರ್ ಇರುವುದು ನಮಗೆಲ್ಲ ತಿಳಿದೇ ಇದೆ.

ಎರಡನೆಯದಾಗಿ ಆಡಳಿತವರ್ಗವು ಮಧ್ಯಸ್ತಿಕೆಯಲ್ಲಿ ಕೇವಲ ಗುತ್ತಿಗೆ ಕಾರ್ಮಿಕರ ವಿಚಾರ ಮಾತ್ರ ಚರ್ಚೆಯಾಗುತ್ತದೆ ಎಂದೂ, ಖಾಯಂ ಕಾರ್ಮಿಕರಿಗೂ ಮಧ್ಯಸ್ತಿಕೆಗೂ ಸಂಬಂಧವಿಲ್ಲ ಎಂದು ಸುಳ್ಳು ಹೇಳಿದೆ.

ಆದರೆ, 16.8.2018 ರಂದು ನಡೆದ ಸಭೆಯಲ್ಲಿ GATWU ಈ ಮೂರು ವಿಷಯಗಳನ್ನು ಮಧ್ಯಸ್ಥಿಕೆಗಾಗಿ ಮುಂದಿಟ್ಟಿದೆ.

- ಕಾನೂನು ಬಾಹಿರವಾಗಿ ಕೆಲಸ ನಿರಾಕರಿಸಲಾಗಿರುವ ಗುತ್ತಿಗೆ ಕಾರ್ಮಿಕರನ್ನು ಪುನ: ಕೆಲಸಕ್ಕೆ ತೆಗೆದುಕೊಳ್ಳಬೇಕು
- ಎಲ್ಲ ಗುತ್ತಿಗೆ ಕಾರ್ಮಿಕರನ್ನು ಖಾಯಂ ಗೊಳಿಸಬೇಕು ಮತ್ತು
- GATWU ವನ್ನು ರೆಕಗ್ನೈಸ್ ಮಾಡಬೇಕು

ಕೊನೆಯ ಅಂಶವು ಖಾಯಂ ಕಾರ್ಮಿಕರನ್ನೂ ಸೇರಿದಂತೆ ಎಲ್ಲ ಕಾರ್ಮಿಕರಿಗೂ ಸಂಬಂಧ ಪಟ್ಟಿದ್ದಾಗಿದ್ದು, ಆಡಳಿತವರ್ಗದವರು ಅದನ್ನು ನಿರ್ಧರಿಸಲು ಸಮಯಾವಕಾಶ ಕೇಳಿದ್ದಾರೆ. ಈ ಸಭೆಯು ಅಧಿಕೃತ ಸಭೆಯಾಗಿದ್ದು, ಆಡಳಿತವರ್ಗವು ಇದನ್ನು ಅಲ್ಲಗಳೆಯಲು ಸಾಧ್ಯವಿಲ್ಲ.

ಆದ್ದರಿಂದ ಸಂಗಾತಿಗಳೇ,

ಆಡಳಿತವರ್ಗವು ಯಾವುದೇ ದಾಖಲೆಯಿಲ್ಲದೆ ಹಬ್ಬಿಸುವ ಸುಳ್ಳು ಮತ್ತು ಗಾಳಿಸುದ್ದಿಗಳನ್ನು ನಂಬದೆ, ಇದೇ ಒಗ್ಗಟ್ಟನ್ನು ಕಾಪಾಡಿಕೊಂಡು ನಮಗೆ ಸಿಗಬೇಕಾದ ನ್ಯಾಯಯುತ ಸವಲತ್ತುಗಳನ್ನು ಪಡೆಯೋಣ, ಇಲ್ಲಿಯವರೆಗೂ ನಮಗೆ ನ್ಯಾಯಯುತವಾಗಿ, ಕಾನೂನುಬದ್ಧವಾಗಿ ಸಿಗಬೇಕಾದ ಹಲವಾರು ಸವಲತ್ತುಗಳಿಂದ ವಂಚಿತರಾಗಿದ್ದೇವೆ. ಆದರೆ ನಾವು ಜಾಗೃತರಾಗಿದ್ದೇವೆ ಎಂಬುದನ್ನು ಈಗ ಅವರಿಗೆ ತೋರಿಸಿಕೊಡೋಣ.

ಯಾವತ್ತಿಗೂ GATWU ಕಾರ್ಮಿಕರ ನ್ಯಾಯಯುತ ಕಾನೂನುಬದ್ಧ ಸವಲತ್ತುಗಳಿಗಾಗಿ ಸತತವಾಗಿ ಹೋರಾಡುತ್ತದೆ.

**ಏನೇ ಬರಲಿ ಒಗ್ಗಟ್ಟಿರಲಿ. . . . ., ಒಗ್ಗಟ್ಟಿನಲ್ಲಿ ಬಲವಿದೆ . . . . .. ಎಲ್ಲಿಯವರೆಗೂ ಹೋರಾಟ,.. . .. . ಗೆಲ್ಲುವವರೆಗೂ ಹೋರಾಟ. .**

---

**GATWU** - ನಂ. 17/I, ಮೊದಲನೇ ಮಹಡಿ, ಹೊಸಗುಡ್ಡದಹಳ್ಳಿ, ಮೈಸೂರು ರಸ್ತೆ, ಬೆಂಗಳೂರು – 560 026

Scanned with OKEN Scanner